ಇಂದು ದಿನಾಂಕ:22.03.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದ:

1. ಅಸಲು ದಾವಾ ಸಂ.124/2019 ರಂತೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಿಗೆರೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಷೆಡ್ಯೂಲ್ 5 ವಾಹನಗಳನ್ನು ನನ್ನ ಮತ್ತು ನನ್ನ ಮಕ್ಕಳನ್ನು ಹೊರತುಪಡಿಸಿ ಬೇರೆಯವರ ಬಳಸಬಾರದೆಂದು ಪರಿಹಾರಗಳನ್ನು ಕೋರಿದ್ದೆ. ಆ ದಾವೆಯನ್ನು ನಾನೇ ವಜಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು, ಆ ವಾಹನಗಳಿಗೆ ಎಫ್.ಸಿ ಮತ್ತು ಇನ್ಸೂರೆನ್ಸ್ ಇಲ್ಲದ ಕಾರಣ ದಾವೆಯನ್ನು ನಾನೇ ವಜಾ ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ.

2. ಸರ್ವೆ ನಂ.306 ರ ಆಸ್ತಿ ನಮ್ಮ ಮನೆ ಪಕ್ಕದಲ್ಲಿದ್ದು, ಸುಮಾರು 20 ವರ್ಷಗಳಿಂದಲೂ ನಾನೇ ವ್ಯವಸಾಯ ಮಾಡಿ ಕಾಫಿ ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ನಂತರ 2002 ರಲ್ಲಿ ಅಂಥೋರಿಯಂ ಹೂವನ್ನು ಬೆಳೆದಿದ್ದೇನೆ. ಸರ್ವೆ ನಂ.306 ರ ಪೃಥ್ವಿರಾಜ್ ಮತ್ತು ಶಾರದಮ್ಮರವರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಪೃಥ್ವಿರಾಜ್ ರವರಿಗೆ 2 ಎಕರೆ 16 ಗುಂಟೆ, ಶಾರದಮ್ಮರವರಿಗೆ 4 ಎಕರೆ 38 ಗುಂಟೆ ಆಸ್ತಿ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.306 ರ ಸರ್ಕಾರಿ ಜಾಗವನ್ನು ಮಂಜೂರಿ ಮಾಡಿ ಕೋರಿರುವ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಅರ್ಜಿಯನ್ನು 2002 ನೇ ಸಾಲಿನಲ್ಲಿ ನೀಡಿರುತ್ತೇನೆ. ಸರ್ವೆ ನಂ.416/4 ಸರ್ಕಾರಿ ಜಾಗ. ನನ್ನ ವಾದಪತ್ರದಲ್ಲಿ ಸರ್ವೆ ನಂ.306 ಮತ್ತು 416/4 ಆಸ್ತಿಗಳು ಸರ್ಕಾರಿ ಜಾಗ ಎಂದು ಹೇಳಿದ್ದೇನೆ.

3. ನನ್ನ ತಂದೆಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಸಾಕ್ಷಿಯು ಒಬ್ಬರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ.10.06.1985 ರಲ್ಲಿ ನಾನು, ನನ್ನ ಸಹೋದರರು ಮತ್ತು ನನ್ನ ತಂದೆಯ ನಡುವೆ ಜುಬಾನೆ ಹಿಸ್ಸೆಯಾಗಿರುತ್ತದೆ. ಸರ್ವೆ ನಂ.306 ಮತ್ತು 416/4 ಆಸ್ತಿಗಳು ಸರ್ಕಾರಿ ಆಸ್ತಿಯಾಗಿದ್ದರಿಂದ ಯಾರ ಆಸ್ತಿಗೂ ಜುಬಾನೆ ಹಿಸ್ಸೆಯಲ್ಲಿ ತೋರಿಸಿಲ್ಲ. ದಾವಾ ಷೆಡ್ಯೂಲ್ ವಾಹನಗಳನ್ನು 1996, 2000, 2001 ಮತ್ತು 2012 ರಲ್ಲಿ ಖರೀದಿಸಿರುತ್ತೇನೆ. 2001 ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. 1985 ನೇ ಸಾಲಿನಲ್ಲಿ ಜುಬಾನೆ ಹಿಸ್ಸಾ ಪತ್ರವನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ದಾವಾ ಷೆಡ್ಯೂಲ್ 1 ನೇ ವಾಹನ

ಅಂಥೋರಿಯಂ ತೋಟದಲ್ಲಿ ಕಟ್ಟು ನಿಂತಿದ್ದೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ, ದಾವಾ ಷೆಡ್ಯೂಲ್ 1 ನೇ ವಾಹನ ಗ್ಯಾರೇಜಿನಲ್ಲಿ ಕೆಟ್ಟು ನಿಂತಿದ್ದೆ ಎಂದು ತೋರಿಸಲಾಗಿ, ಹೌದು ಎಂದು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಿ, ದಾವಾ ಷೆಡ್ಯೂಲ್ 4 ನೇ ವಾಹನ ಗ್ಯಾರೇಜಿನಲ್ಲಿ ನಿಂತಿದ್ದೆ ಎಂದು ಸೂಚಿಸಲಾಗಿ ಹೌದು ಎಂದು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಮುಂದುವರೆದು, ಗ್ಯಾರೇಜ್ ಎಂದರೆ ಶೆಡ್ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಅದರಲ್ಲಿರುವ ದಾವಾ ಷೆಡ್ಯೂಲ್ 2 ನೇ ವಾಹನವನ್ನು ತೋರಿಸಿ, ಶೆಡ್ಡಿನಲ್ಲಿ ನಿಂತಿದೆ ಎಂದು ಸೂಚಿಸಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

4. ನಾನು ದಾವೆಯನ್ನು ದಾಖಲಿಸಿದಾಗ ವಾಹನಗಳು ಶೆಡ್ಡಿನಲ್ಲಿಯೇ ಇದ್ದವು ಎಂದರೆ ಸಾಕ್ಷಿಯು ಮನೆಯ ಹತ್ತಿರ ಇರುವ ಶೆಡ್ಡಿನಲ್ಲಿ ಇದ್ದವು ಎಂದು ನುಡಿಯುತ್ತಾರೆ. ಅಸಲು ದಾವಾ ಸಂ.124/2019 ರಲ್ಲಿ ವಾಹನಗಳು ಜಖಂ ಆದ ಬಗ್ಗೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಆಗ ಜಖಂ ಆಗಿರಲಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸಿದ ಕಾಲಕ್ಕೂ ಸಹ ವಾಹನಗಳು ಜಖಂ ಆಗಿರಲಿಲ್ಲ. ದಾವಾ ಷೆಡ್ಯೂಲ್ 2 ನೇ ವಾಹನ 2023 ನೇ ಸಾಲಿನಲ್ಲಿ ಜಖಂ ಆಗಿರುತ್ತದೆ. ದಾವಾ ಷೆಡ್ಯೂಲ್ 1 ಮತ್ತು 4 ನೇ ವಾಹನಗಳು ಜಖಂ ಆಗಿಲ್ಲ. ದಾವಾ ಷೆಡ್ಯೂಲ್ 1, 2 ಮತ್ತು 4 ನೇ ವಾಹನಗಳು ಈಗಲೂ ಸಹ ಶೆಡ್ಡಿನಲ್ಲಿ ಇವೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಬಲತ್ಕಾರದಿಂದ ತೆಗೆದುಕೊಂಡು ಹೋಗಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ.23.07.2021 ರಲ್ಲಿ ಎಲ್ಲಾ ವಾಹನಗಳು ಪ್ರತಿವಾದಿಗಳು ಬಲತ್ಕಾರದಿಂದ ತೆಗೆದುಕೊಂಡು ಹೋಗಿರುತ್ತಾರೆ. ಆ ಕುರಿತು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆದರೆ ಪೊಲೀಸರು ನನ್ನ ದೂರಿನ್ನು ತೆಗೆದುಕೊಂಡಿರುವುದಿಲ್ಲ. ಅದರ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ನೀಡಿಲ್ಲ. ಸಾಕ್ಷಿಗೆ 2 ಫೋಟೋಗಳ ದೃಡೀಕೃತ ಪ್ರತಿಯನ್ನು ತೋರಿಸಲಾಗಿ ಅದು ದಾವಾ ಷೆಡ್ಯೂಲ್ 3 ನೇ ವಾಹನ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಒಪ್ಪಿಕೊಂಡ ಕಾರಣ, ಸದರಿ ದಾಖಲಾತಿಯನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ನಿಡಿ-4 2019 ರಲ್ಲಿ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದ್ದ ಬಗೆಗಿನ ಫೋಟೋ ಎಂದರೆ ಸರಿಯಲ್ಲ. ಸದರಿ ದಾಖಲಾತಿಯು ಅಸಲು ದಾವಾ ಸಂ.114/2019 ರಲ್ಲಿ ಸಲ್ಲಿಸಿದ್ದು ಎಂದರೆ ಸರಿಯಲ್ಲ.

5. ನಿಡಿ-4 ರಲ್ಲ ಕಾಣುವ ವಾಹನವನ್ನು 1 ನೇ ಪ್ರತಿವಾದಿ ತೆಗೆದುಕೊಂಡುವ ಕಾಲಕ್ಕೆ ತಡೆದು ನಿಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಆಗ ನಾನು ಬೆಂಗಳೂರಿನಲ್ಲಿದೆ ಎಂದು ನುಡಿಯುತ್ತಾರೆ.

ಈದಾವೆಯನ್ನು ಸಲ್ಲಿಸುವ ಮೊದಲು ಎಂ.ಕೆ.ಪ್ರಾಣೇಶ್, ಪ್ರಭಾ ಮತ್ತು ಬಾಲಕೃಷ್ಣ ಎಂಬುವವರಿಗೆ ಪತ್ರ ಬರೆದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಐ.ಎ ನಂ.3 ರ ಮೆಲಿನ ವಾದಿಯ ಸಹಿಯನ್ನು ತೋರಿಸಲಾಗಿ ಅದು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಐ.ಎ ನಂ.4 ರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದ ಸಹಿಯನ್ನು ತೋರಿಸಲಾಗಿ ಅದು ನನ್ನದೇ ಎಂದು ನುಡಿಯುತ್ತಾರೆ. ನಾನು ಎಂ.ಕೆ.ಪ್ರಾಣೇಶ್, ಪ್ರಭಾ ಮತ್ತು ಬಾಲಕೃಷ್ಣ ಎಂಬುವವರಿಗೆ ಬರೆದ ಪತ್ರದಲ್ಲಿ ದಾವಾ ಷೆಡ್ಯೂಲ್ ವಾಹನಗಳನ್ನು ಪ್ರತಿವಾದಿಯರೇ ಇಟ್ಟುಕೊಳ್ಳತಕ್ಕದು ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ವಾಹನಗಳಲ್ಲಿ 5 ನೇ ವಾಹನ ಹಳೆಯ ಕಾರು ಮತ್ತು ದಾವಾ ಷೆಡ್ಯೂಲ್ 2 ನೇ ವಾಹನ ಹೊಸ ಕಾರು. 2019 ಕ್ಕಿಂತ ಮೊದಲು ನಾನು ಮತ್ತು ಪ್ರತಿವಾದಿಗಳು ಚೆನ್ನಾಗಿದ್ದೇವು ಎಂದರೆ ಸರಿ. ನನ್ನ ಮನೆಯ ಗೃಹಪ್ರವೇಶಕ್ಕೆ ಪ್ರತಿವಾದಿಗಳು ದಾವಾ ಷೆಡ್ಯೂಲ್ 2 ಮತ್ತು 3 ವಾಹನಗಳಲ್ಲಿ ಬಂದಿದ್ದರೂ ಎಂದರೆ ಸಾಕ್ಷಿಯು ದಾವಾ ಷೆಡ್ಯೂಲ್ 2 ನೇ ವಾಹನದಲ್ಲಿ ಬಂದಿದ್ದರೂ ಮತ್ತೊಂದು ಬಾಡಿಗೆ ಕಾರ್ ಆಗಿತ್ತು ಎಂದು ನುಡಿಯುತ್ತಾರೆ.

6. ನಾನು ಬೆಂಗಳೂರಿನಲ್ಲಿಯೇ ವಾಸವಿದ್ದೇನೆ ಎಂದರೆ ಸರಿ. ಪ್ರತಿವಾದಿಗಳು ಕೃಷಿ ಚಟುವಟಿಕಗೆಳನ್ನು ಮಾಡಿಕೊಂಡು ಮಾಕೋನಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ನಾನು ಪ್ರತಿವಾದಿಗಳಿಗೆ ಯಾವುದೇ ವಾಹನವನ್ನು ತೆಗೆದುಕೊಟ್ಟಿಲ್ಲ. 2019 ರಲ್ಲಿ ಅಂಥೋರಿಯಂ ಪ್ಲಾಂಟ್ ಅನ್ನು ಬಿಟ್ಟುಕೊಡುವಂತೆ ನಾನು 1 ನೇ ಪ್ರತಿವಾದಿಗೆ ಕೇಳಿದ್ದೇನೆ ಎಂದರೆ ಸುಳ್ಳು. ಅದನ್ನು ಬಿಟ್ಟುಕೊಡಲಿಲ್ಲ ಎಂಬ ಕಾರಣದಿಂದ ನಾನು ಆ ಪ್ಲಾಂಟಿಗೆ ಡ್ಯಾಮೇಜ್ ಮಾಡಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಅದನ್ನು ಬಿಟ್ಟುಕೊಡಲಿಲ್ಲ ಎಂಬ ಕಾರಣದಿಂದ ನಾನು ದಾವಾ ಷೆಡ್ಯೂಲ್ ವಾಹನಗಳನ್ನು ಕೊಡಬೇಕೆಂದು ಕೇಳಿರುತ್ತೇನೆ ಹಾಗೂ ಆ ಬಗ್ಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ವಾಹನಗಳು ನಾನು ಖರೀದಿಸಿದ ದಿನಾಂಕದಿಂದಲೂ ಪ್ರತಿವಾದಿಗಳ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಈವರೆಗೂ ನೋಂದಾಯಿತ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ಈ ಹಿಂದೆಯೇ ಜುಬಾನೆ ಹಿಸ್ಸೆಯಾಗಿತ್ತು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ವಾಹನಗಳನ್ನು ನಾನು ಖರೀದಿಸಿದ ದಿನಾಂಕದಿಂದಲೂ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಪ್ರತಿವಾದಿಗಳು ಬಲತ್ಕಾರದಿಂದ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

7. ದಾವಾ ಷೆಡ್ಯೂಲ್ ವಾಹನಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎನ್ನುವ ದಿನಾಂಕಗಳಂದು ಅಸಲು ದಾವಾ ಸಂ.124/2019 ವಿಚಾರಣೆಗೆ ಬಾಕಿ ಇತ್ತು ಎಂದರೆ ಸಾಕ್ಷಿಯು ನನ್ನ ಪರವಾಗಿ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದರು ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಪ್ರತಿವಾದಿಗಳು

ತಾತ್ಕಾಲಿಕ ತಡೆಯಾಜ್ಞೆ ಉಲ್ಲಂಘನೆ ಮಾಡಿದ್ದಾರೆ ಎಂದು ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿ ಏನಾಗಿರುತ್ತದೆ ಎಂದರೆ ಸಾಕ್ಷಿಯು ಅದೇ ಅರ್ಜಿಯೇ ಈ ದಾವೆ ಎಂದು ನುಡಿಯುತ್ತಾರೆ. ಆ ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ತಂದು ಹಾಜರುಪಡಿಸಿರುತ್ತೇನೆ. ಸರ್ವೆ ನಂ.306 ಮತ್ತು 416/4 ರ ಆಸ್ತಿಗಳು ನನ್ನ ಸ್ವಾಧೀನದಲ್ಲಿ ಇಲ್ಲದ ಕಾರಣ ವಾಹನಗಳನ್ನು ಅಲ್ಲಿ ನಿಲ್ಲಿಸುವ ಪ್ರಮೇಯ ಉಂಟಾಗಿಲ್ಲ ಎಂದರೆ ಸುಳ್ಳು. ಸರ್ವೆ ನಂ.416/4 ರಲ್ಲಿರುವ ಅಂಥೋರಿಯಂ ಪ್ಲಾಂಟ್ ಅನ್ನು ಹೇಗಾದರು ಮಾಡಿ ಕಬಳಿಸಬೇಕೆಂಬ ಉದ್ದೇಶದಿಂದ ಈ ರೀತಿ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಎಂ.ಕೆ.ಪ್ರಾಣೇಶ್, ಪ್ರಭಾ ಮತ್ತು ಬಾಲಕೃಷ್ಣ ಎಂಬುವವರಿಗೆ ನಾನು ಪತ್ರ ಬರೆದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಹಣ ಪಡೆದುಕೊಂಡು, ದಾವಾ ಷೆಡ್ಯೂಲ್ ವಾಹನಗಳನ್ನು ನಾನು ನನ್ನ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆಗಳನ್ನು ಸಲ್ಲಿಸುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ.

8. 2 ನೇ ಪ್ರತಿವಾದಿಯ ಕೂಲಿ ಲೇನ್ ನಲ್ಲಿ ಸರ್ವೆ ನಂ.279 ರಲ್ಲಿ ಬರುತ್ತದೆ. ಪ್ರತಿವಾದಿಗಳ ಹೊಸ ಮನೆ ನನ್ನ ತಾಯಿಗೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ.280 ಮತ್ತು 317/2 ಪಿರ ಆಸ್ತಿಗಳನ್ನು ವಾಪಾಸು ಪ್ರತಿವಾದಿಗಳಿಗೆ ಕೊಡುತ್ತೇನ ಎಂದು ಎಂ.ಕೆ.ಪ್ರಾಣೇಶ್, ಪ್ರಭಾ ಮತ್ತು ಬಾಲಕೃಷ್ಣ ಎಂಬುವವರಿಗೆ ಬರೆದ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಜಮೀನಿನ ಮತ್ತು ವಾಹನದ ಸಂಬಂಧ ಯಾವುದೇ ಪಂಚಾಯಿತಿ ಕೂರಿಸಿಲ್ಲ. ನನ್ನ ಬೆಂಗಳೂರಿನ ಮನೆ ಮತ್ತು ಸೈಟುಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಅವುಗಳಲ್ಲಿಯೂ ಸಹ ಪ್ರತಿವಾದಿಗಳು 2021 ರಲ್ಲಿ ನನ್ನನ್ನು ಕೇಳಿರುತ್ತಾರೆ ಎಂದರೆ ಸುಳ್ಳು. ನಾನು ಅಚಲ್ ಕೇಬಲ್ ವರ್ಕ್ ಅನ್ನು ನಡೆಸುತ್ತಿರುವ ಕಾರಣ ನನಗೆ ಒತ್ತಡ ಮಾಡುವ ಪ್ರವೃತಿ ಹೊಂದಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಂಥೋರಿಯಂ ಪ್ಲಾಂಟ್ ಮತ್ತು ವಾಹನವನ್ನು ನೀಡಲಿಲ್ಲ ಎಂಬ ಕಾರಣದಿಂದ ಬೆಂಗಳೂರಿನಿಂದ ರೌಡಿಗಳನ್ನು ಕರೆದುಕೊಂಡು ಬಂದು ಅವರಿಂದ ಒತ್ತಡ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ.10.06.1985 ರಲ್ಲಿ ಯಾವುದೇ ಜುಬಾನೆ ಹಿಸ್ಸೆಯಾಗಿಲ್ಲ ಎಂದರೆ ಸರಿಯಲ್ಲ. ವಾಹನಗಳನ್ನ ಬಲತ್ಕಾರದಿಂದ ತೆಗೆದುಕೊಂಡು ಹೋಗಿದ್ದಾರೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ